ಶ್ರೀ ಎಂ. ರಾಜಶೇಖರ ಮೂರ್ತಿ.— ಸುಸ್ತಿದಾರರು ಇರುವುದು ೧೫೫ ಜನ ಮಾತ್ರ. ಅವರಿಂದ ಬರಬೇಕಾದುದು ೩೧ ಲಕ್ಷ ರೂಪಾಯಿಗಳು. ಈಗಾಗಲೇ ವಸೂಲಿ ಕ್ರಮ ಮಾಡುತ್ತಿದ್ದೇವೆ. ಹಣ ಬರುತ್ತಿದೆ ಆದಷ್ಟು ಜಾಗ್ರತೆ ಎಲ್ಲಾ ಹಣವನ್ನು ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಡಿ.ಎ. ಚಿನ್ನಪ್ಪ.— ೧೫೫ ಜನ ಡಿಫಾಲ್ಟರ್ಸ್ ಏನು ಇದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಹೆಚ್ಚು ಹಣ ಕೊಡಬೇಕಾದ ಡಿಫಾಲ್ಟರ್ ಯಾರು?

SRI M. RAJASHEKHAR MURTHY.— It is not possiible for me, now to say the names of 155 persons If the hon. Member had asked this in his question, I would have furnished ೧೫೫ ಜನ ಸುಸ್ತಿದಾರರು ಇದ್ದಾರೆ. ಈಗ ಎಲ್ಲರ ಹೆಸರುಗಳನ್ನು ಹೇಳುವುದಕ್ಕಾಗುವುದಿಲ್ಲ.

ಚಿಂತಾಮಣಿ ನಗರದಲ್ಲಿ ಪಡಿತರ ಚೀಟಿಯ ವಿತರಣೆ

೨೩೪. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ಪಡಿತರ, ಚೀಟಿ ಪಡೆಯದ ಕುಟುಂಬಗಳ ಬಗ್ಗೆ ಸಮೀಕ್ಷೆಯನ್ನು ಕಂದಾಯ ಇಲಾಖೆಯಿಂದ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಚಿಂತಾಮಣಿ ಪಟ್ಟಣದಲ್ಲಿ ಸಮೀಕ್ಷೆಯ ಪ್ರಕಾರ ಪಡಿತರ ಚೀಟಿಗಳು ಪಡೆಯದ ಕುಟುಂಬಗಳೆಷ್ಟು?

ಇ) ಅಂತಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ೨೦೦೦.

ಇ) ೬೦೦ ಅರ್ಜಿಗಳನ್ನು ಪಡೆದಿದ್ದು, ಅವುಗಳಲ್ಲಿ ೩೦೦ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಿದ್ದು ಉಳಿಕೆ ಅರ್ಜಿಗಳನ್ನು ಪರಿಶೀಲಿಸಿದ ನಂತರ ಅರ್ಹರಾದವರಿಗೆ ಪಡಿತರ ಚೀಟಿ ವಿತರಿಸಲಾಗುವುದು

ಶ್ರೀ ಚೌಡರೆಡ್ಡಿ.— ಪಡಿತರ ಕಾರ್ಡ್ ಬಗ್ಗೆ ಸಮೀಕ್ಷೆ ನಡೆಸಿದ್ದೇವೆಂದು ಹೇಳಿದ್ದೀರಿ. ಜೊತೆಗೆ ಎರಡು ಸಾವಿರ ಜನರಿಗೆ ಪಡಿತರ ಚೀಟಿಗಳನ್ನು ಕೊಡಬೇಕೆಂದು ತಿಳಿಸಿದ್ದೀರಿ. ಇದರಲ್ಲಿ ೩೦೦ ಬಾಕಿ ಇದೆ ಎಂದು ಹೇಳಿದ್ದೀರಿ. ನನಗೆ ಗೊತ್ತಿದ್ದ ಹಾಗೆ ೧೬೦೦ ಕಾರ್ಡುಗಳನ್ನು ಕೊಡಬೇಕಾಗುತ್ತದೆ. ತಹಸೀಲ್ದಾರರ ಜೊತೆ ಮಾತನಾಡಿದಾಗ ಕಾರ್ಡ್ ಸಿಗುತ್ತಿಲ್ಲ. ಕಾರ್ಡ್ ಬಂದಮೇಲೆ ಕೊಡುತ್ತೇವೆಂದು ಹೇಳುತ್ತಾರೆ. ಒಂದು ಡ್ರೈವಿಂಗ್ ಲೈಸನ್ಸ್ ತೆಗೆದುಕೊಳ್ಳಬೇಕಾದರೆ ಈ ಕಾರ್ಡ್‌ನಿಂದ ಐಡೆಂಟಿಫಿಕೇಷನ್ ಬೇಕಾಗುತ್ತದೆ ದಯವಿಟ್ಟು ಬೇಗ ಕಾರ್ಡ್ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಜೆ.ಜಾರ್ಜ್.— ಎರಡು ಸಾವಿರ ಕಾರ್ಡ್‌ಗಳನ್ನು ಕೊಡಬೇಕೆಂದು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಸರ್ವೆ ಮಾಡಿಕೊಟ್ಟಿದ್ದಾರೆ. ಆದರೆ ಫುಡ್ ಡಿಪಾರ್ಟ್‌ಮೆಂಟಿಗೆ ಅರ್ಜಿ ಕೊಟ್ಟು ಸಾಕಷ್ಟು ದಾಖಲೆಗಳನ್ನು ಕೊಡಬೇಕಾಗಿರುತ್ತದೆ. ಈಗಾಗಲೇ ೬೦೦ ಜನ ಅರ್ಜಿ ಕೊಟ್ಟಿದ್ದಾರೆ, ಆದರಲ್ಲಿ ೩೦೦ ಜನರಿಗೆ ಕಾರ್ಡುಗಳನ್ನು ಕೊಡಲಾಗಿದೆ. ಬಾಕಿಯವರಿಗೆ ಕೊಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಚೌಡರೆಡ್ಡಿ.— ತಹಸೀಲ್ದಾರರು ಡಿ.ಸಿ.ಗೆ ೧೬೦೦ ಕಾರ್ಡುಗಳು ಬೇಕಾಗಿವೆ ಎಂದು ಪತ್ರ ಬರೆದಿದ್ದಾರೆ. ಆ ಪತ್ರದ ಕಾಪಿ ಕೂಡ ನನ್ನ ಹತ್ತಿರ ಇದೆ. ದಯವಿಟ್ಟು ಆದಷ್ಟು ಬೇಗ ಕಾರ್ಡುಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಕೆ.ಜೆ. ಜಾರ್ಜ್.— ಕಾರ್ಡ್‌ಗಳ ಕೊರತೆ ಇದ್ದರೆ ಆದಷ್ಟು ಬೇಗ ಕೊಡುವುದಕ್ಕೆ ಆದೇಶ ನೀಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.